## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ಹ.ಬ./ವಿವಾದ:172/2014-15 ದಿ:೦9-08-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1. ಎಸ್. ಬಸವನಗೌಡ ತಂದೆ: ಹಂಪನಗೌಡ
   ಬಸವೇಶ್ವರ ನಗರ, ರಾಯಚೂರು
   ತಾ: ಜಿ: ರಾಯಚೂರು
2. ತಿಮ್ಮನಗೌಡ ತಂದೆ: ಅಯ್ಯನಗೌಡ
   ಶಾನವಾಸಪುರ ಗ್ರಾಮ, ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಸರ್ವಮಂಗಳ ಉರುಫ್ ಪ್ರಮೋದಿನಿ
ಗಂಡ: ಚಂದ್ರಶೇಖರಗೌಡ
ಶಾನವಾಸಪುರ ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಶಾನವಾಸಪುರ ಗ್ರಾಮ | 54 | 5-41 | H-19/2013-14 | 45/13-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಶಾನವಾಸಪುರ ಗ್ರಾಮದ ಸ.ನಂ.54 ವಿಸ್ತೀರ್ಣ 5-41ಎಕರೆ** ಜಮೀನಿಗೆ ಸಂಭಂದಿಸಿದಂತೆ **ಸಿರುಗುಪ್ಪ ಉಪನೊಂದಣಿ ಪತ್ರ ನಂ:SRG-1-07442/ 2012-13 Dt.8-2-2013 ರನ್ವಯ ಎಸ್.ಬಸವನಗೌಡ ತಂದೆ: ಹಂಪನಗೌಡ** ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಸರ್ವಮಂಗಳ ಉರಫ್ ಪ್ರಮೋದಿನಿಇವರು ದಿ:16-09-2013 ರಂದು** ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **23-01-2013, 13-01-2013,21-08-2015, 18-09-2015, 07-05-2016, 17-05-2016, 08-07-2016** ಮತ್ತು**05-08-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ 1) ಎಸ್.ಬಸವನಗೌಡ ತಂದೆ: ಹಂಪನಗೌಡ ರಾಯಚೂರು ಇವರು ಶಾನವಾಸಪುರ ಗ್ರಾಮದ ಸ.ನಂ.54 ವಿಸ್ತೀರ್ಣ 5–41ಎಕರೆ ಜಮೀನು ತಿಮ್ಮನಗೌಡ ತಂದೆ: ಅಯ್ಯನಗೌಡ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-07442/ 2012-13 Dt.8-2-2013** ರನ್ವಯ ವಿಕ್ರಯ ಪತ್ರದ ನೊಂದಣಿ ಮೂಲಕ ಖರೀದಿ ಹೊಂದಿ ಹಕ್ಕು ಬದಲಾವಣೆ ಸಂದರ್ಭದಲ್ಲಿ ಸರ್ವಮಂಗಳ ಉರಫ್ ಪ್ರಮೋದಿನಿ ಗಂಡ: ಚಂದ್ರ ಶೇಖರ ಗೌಡ ಇವರು ನಿರಾಧಾರವಾಗಿ ತಕರಾರು ಅರ್ಜಿಸಲ್ಲಿಸಿರುತ್ತಾರೆ. ಯಾವುದೇ ದಾಖಲೆಗಳನ್ನು ಸಲ್ಲಿಸದೇ ಯಾವೊಂದು ವಿಚಾರಣೆಗೂ ಹಾಜರಾಗಿರುವುದಿಲ್ಲ ಅಥವಾ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ. ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ನೊಂದಣಿ ಕಛೇರಿಯ ನೊಂದಾಯಿತ ವಿಕ್ರಯ ಪತ್ರ ಪ್ರಕಾರ ಮತ್ತು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪ ಓ.ಎಸ್ ನಂ 206/2013 ರಲ್ಲಿ ನೀಡಿದ ತೀರ್ಮಾನದ ಆದೇಶದ ಪ್ರಕಾರ ಹಕ್ಕು ಬದಲಾವಣೆಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

2) ತಿಮ್ಮನಗೌಡ ತಂಚದೆ: ಅಯ್ಯನಗೌಡ ಶಾನವಾಸಪುರ ಇವರು ಶಾನವಾಸಪುರ ಗ್ರಾಮದ ಸ.ನಂ.54 ವಿಸ್ತೀರ್ಣ 5–41ಎಕರೆ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-07442/ 2012-13 Dt.8-2-2013** ರನ್ವಯ ವಿಕ್ರಯ ಪತ್ರದ ನೊಂದಣಿ ಮೂಲಕ ಎಸ್. ಬಸವನಗೌಡ ತಂದೆ: ಹಂಪನಗೌಡ ಇವರಿಗೆ ಮಾರಾಟ ಮಾಡಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ಸರ್ವಮಂಗಳ ಅಲಿಯಾಸ್ ಪ್ರಮೋದಿನಿ ಗಂಡ: ಚಂದ್ರ ಶೇಖರ ಗೌಡ ಇವರು ನಿರಾಧಾರವಾಗಿ ತಕರಾರು ಅರ್ಜಿಸಲ್ಲಿಸಿರುತ್ತಾರೆ. ಯಾವುದೇ ದಾಖಲೆಗಳನ್ನು ಸಲ್ಲಿಸದೇ ಯಾವೊಂದು ವಿಚಾರಣೆಗೂ ಹಾಜರಾಗಿರುವುದಿಲ್ಲ ಅಥವಾ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ. ಆದ್ದರಿಂದ ನಿರಾಧಾರವಾದ ತಕರಾರು ಅರ್ಜಿಯನ್ನು ತಳ್ಳಿಹಾಕಿ ನೊಂದಣಿ ಕಛೇರಿಯ ನೊಂದಾಯಿತ ವಿಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

<u>ಪ್ರತಿವಾದಿಗಳು</u>

ಪ್ರತಿವಾದಿಗಳಾದ ಸರ್ವಮಂಗಳ ಉರಫ್ ಪ್ರಮೋದಿನಿ ಗಂಡ: ಚಂದ್ರ ಶೇಖರ ಗೌಡ ಶಾನವಾಸಪುರ ಗ್ರಾಮ ಇವರು ಶಾನವಾಸಪುರ ಗ್ರಾಮದ ಸ.ನಂ.54 ವಿಸ್ತೀರ್ಣ 5–41ಎಕರೆ ಜಮೀನು ತಿಮ್ಮನಗೌಡ ತಂದೆ: ಅಯ್ಯನಗೌಡ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-07442/ 2012-13 Dt.8-2-2013** ರನ್ವಯ ವಿಕ್ರಯ ಪತ್ರದ ನೊಂದಣಿ ಮೂಲಕ ಖರೀದಿ ಹೊಂದಿ ಹಕ್ಕು ಬದಲಾವಣೆ ಸಂದರ್ಭದಲ್ಲಿ ದಿ:16–09–2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣಾ ದಿನಾಂಕಗಳಂದು ವಿಚಾರಣೆಗೆ ಹಾಜರು ಆಗಿರುವುದಿಲ್ಲ ಯಾವುದೇ ಲಿಖಿತ ಹೇಳಿಕೆ ಅಥವಾ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-07442/ 2012-13 Dt.8-2-2013** ರನ್ವಯ ಹಾಗೂ ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪ ಓ.ಎಸ್.ನಂ:206/13 ದಿ:09–10–2015 ರಲ್ಲಿ ನೀಡಿದ ತೀರ್ಮಾನದ ಆದೇಶ ಪ್ರಕಾರ ಎಸ್.ಬಸವನಗೌಡ ತಂದೆ: ಹಂಪನಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## <u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಶಾನವಾಸಪುರ ಗ್ರಾಮದ ಸ.ನಂ.54 ವಿಸ್ತೀರ್ಣ 5–41 ಎಕರೆ ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ: **SRG-1-07442/ 2012-13 Dt.8-2-2013** ರ ಪ್ರಕಾರ ಮತ್ತು ಹಿರಿಯ ಸಿವಿಲ್ ನ್ಯಾಯಾಲಯ ಸಿರುಗುಪ್ಪ ಓ.ಎಸ್. ನಂ: 206/13 ದಿ: 09–10–2015 ರಲ್ಲಿ ನೀಡಿದ ತೀರ್ಮಾನದ ಆದೇಶ ಪ್ರಕಾರ ಎಸ್. ಬಸವನಗೌಡ ತಂದೆ: ಹಂಪನಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 01-09–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ತಹಶೀಲ್ದಾರರು
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು,
ಸಿರುಗುಪ್ಪ ತಾಲೂಕು

ನಾಡ ಕಾರ್ಯಾಲಯ, ಕರೂರು, ದಿ:............ ಸಿರುಗುಪ್ಪ ತಾಲೂಕು

<u>ಇದರ ಪ್ರತಿಯನ್ನು:</u>

1. ವಾದಿ ಹಾಗೂ ಪ್ರತಿವಾದಿಗಳು
1. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.